(ಇಂದು ದಿಃ 22-08-2019 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು)

ಮುಂದುವರೆದ ಪಾಟಿ ಸವಾಲು ಃ- ಶ್ರೀ. ವಿ.ಎಸ್.ಕೆ. ರವರಿಂದ ಃ-

ನಿಪಿ 5 ರಂತೆ ದಾವಾ ಸ್ವತ್ತಿನಲ್ಲಿ 1 ಎಕರೆಗೆ 14 ನೇ ಪ್ರತಿವಾದಿ ಮಾಲೀಕರು ಎಂದರೆ ಸಾಕ್ಷಿ ನನಗೆ ಭಾಗಾಂಶ ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ದಾಖಲಾತಿ ಮೊದಲಿಗೆ ಗುರುಮೂರ್ತಿ ಎಂಬುವವರ ಹೆಸರಿನಲ್ಲಿ ಇತ್ತು. ನಂತರ ಅವರ ಹೆಂಡತಿ ಮಕ್ಕಳ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಖಾತೆ ನನ್ನ ಹೆಸರಿನಲ್ಲಿ ಮತ್ತು ನಮ್ಮ ಕುಟುಂಬದ ಸದಸ್ಯರ ಹೆಸರಿನಲ್ಲಿ ಇತ್ತು ಎಂಬುದಕ್ಕೆ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. ದಾವಾ ಸ್ವತ್ತಿನ ದಾಖಲಾತಿ ಗುರುಮೂರ್ತಿ ಮತ್ತು ಪ್ರತಿವಾದಿ 1 ರಿಂದ 7 ರವರ ಹೆಸರನ್ನು ಬಿಟ್ಟರೆ ಬೇರೆಯವರ ಹೆಸರಿಗೆ ವರ್ಗಾವಣೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 5 ರ ಸಮಯದಲ್ಲಿ ಖಾತೆ ಯಾರ ಹೆಸರಿನಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ. ನಿಪಿ 5 ರ ಸಮಯದಲ್ಲಿ ಪ್ರತಿವಾದಿ 1 ರಿಂದ 7 ರವರೇ ಸ್ವತ್ತಿನ ಮಾಲೀಕರಾಗಿದ್ದರು ದಾಖಲಾತಿಗಳು ಅವರ ಹೆಸರಿನಲ್ಲಿ ಇದ್ದವು ಎಂದರೆ ಸರಿ. ನಿಪಿ 5 ಅನ್ನು ಯಾವ ಕಾರಣಕ್ಕೆ ಬರೆದುಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿ 1 ರಿಂದ 7 ರವರು ಕುಟುಂಬದ ಅವಶ್ಯಕತೆಗಾಗಿ ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ಗುರುಮೂರ್ತಿ ಮತ್ತು ಅವರ ಸಹೋದರರರು ಜಂಟಿ ಸ್ವಾದೀನದಲ್ಲಿ ಇರಲಿಲ್ಲ ಎಂದರೆ ಸರಿ. ದಾವಾ ಸ್ವತ್ತು ಗುರುಮೂರ್ತಿರವರ ಸ್ವಯಾರ್ಜಿತ ಸ್ವತ್ತಾಗಿರುತ್ತದೆ ಎಂದರೆ ಸರಿಯಲ್ಲ. ನಾವು ಹೇಳಿರುವಂತೆ ಯಾವುದೇ ಒಟ್ಟು ಕುಟುಂಬ ಇರಲಿಲ್ಲ ಎಂದರೆ ಸರಿಯಲ್ಲ. ನಾನು 14 ನೇ ಪ್ರತಿವಾದಿಯನ್ನು ನೋಡಿರುವುದಿಲ್ಲ. ನಿಪಿ 5 ಆದ ನಂತರ ದಾವಾ ಸ್ವತ್ತು ವ್ಯವಸಾಯದ ಸ್ವತ್ತಾಗಿರುವುದಿಲ್ಲ ಎಂದರೆ ಗೊತ್ತಿಲ್ಲ. ಖರೀದಿದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ಕುಟುಂಬದ ಇತರೆ ಆಸ್ತಿಗಳನ್ನು ಸೇರಿಸದೇ ಮಾರಾಟವಾದ ಸ್ವತ್ತಿನ ಮೇಲೆ ಮಾತ್ರ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ ದಾವಾ ಸ್ವತ್ತಿನಲ್ಲಿ ಭಾಗಾಂಶದ ಹಕ್ಕು ಇಲ್ಲ ಎಂದರೆ

ಸರಿಯಲ್ಲ. ನಿಪಿ 5 ಕಾನೂನುಬದ್ದ ದಾಖಲಾತಿ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಎ ನು.,

ಸೀನಿಯರ್ ಸಿ.ಜೆ., ಆನೇಕಲ್.